**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 24.10.2024.**

**ಮುಂದುವರೆದ ಮುಖ್ಯ ವಿಚಾರಣೆ - ವಾದಿಯ ಪರ ವಕೀಲರಿಂದ :**

ವಾದಿಯ ವರ್ಗಾವಣೆ ಪ್ರಮಾಣ ಪತ್ರ, ಜನನ ದಿನಾಂಕ ದೃಡೀಕರಣ ಪ್ರಮಾಣ ಪತ್ರ, ಚುನಾವಣಾ ಗುರುತಿನ ಚೀಟಿ ಹಾಗೂ ಪಾಸ್ ಬುಕ್‌ಗಳನ್ನು ಕ್ರಮವಾಗಿ ನಿಪಿ-11 ರಿಂದ ನಿಪಿ-14 ಎಂದು ಗುರುತಿಸಲಾಯಿತು.

**ಪಾಟೀ ಸವಾಲು - 2 ರಿಂದ 6 ನೇ ಪ್ರತಿವಾದಿಯ ಪರ ವಕೀಲರಿಂದ :**

ನಾನು 8 ನೇ ತರಗತಿ ಓದಿರುತ್ತೇನೆ. ನನಗೆ ಓದಲು ಬರೆಯಲು ಬರುತ್ತದೆ. ನಿಪಿ-1 ನ್ನು ನಾನೇ ಮಾಹಿತಿ ನೀಡಿ ನೋಟರಿ ಮಾಡಿಸಿ ಸಲ್ಲಿಸಿರುತ್ತೇನೆಂದರೆ ಸರಿ. ಸಂಬಂಧಿಸಿದ ಇಲಾಖೆಯಿಂದ ಪಡೆದುಕೊಂಡ ವಂಶವೃಕ್ಷವನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ತಾಲ್ಲೂಕು ಕಚೇರಿಯಿಂದ ವಂಶವೃಕ್ಷವನ್ನು ಪಡೆದು ಹಾಜರುಪಡಿಸಲು ಇವತ್ತಿನ ವರೆಗೂ ಪ್ರಯತ್ನಿಸಿರುವುದಿಲ್ಲ. ನಾನು ನಿಪಿ-11 ರಿಂದ 14 ಹೊರತಾಗಿ ಚನ್ನರಾಯಪಟ್ಟಣದ ನಿವಾಸಿ ಎಂದು ತೋರಿಸಲು ಕರಗಪ್ಪರವರ ಕುಟುಂಬದ ಪಡಿತರ ಚೀಟಿಯನ್ನು ಹಾಜರುಪಡಿಸಿರುವುದಿಲ್ಲ. ಸಾಮಾನ್ಯವಾಗಿ ಯಾವುದೇ ಕುಟುಂಬದವರು ಮಗು ಜನಿಸಿದಾಗ ಅವರ ಹೆಸರನ್ನು ಮಾಹಿತಿ ನೀಡಿ ಪಡಿತರ ಚೀಟಿಯಲ್ಲಿ ಸೇರಿಸುತ್ತಾರೆ ಮತ್ತು ಅವರ ಭಾಗದ ರೇಷನ್ ಅನ್ನು ಪಡೆಯುತ್ತಾರೆಂದರೆ ಸರಿ. ನಾನು ಕರಗಪ್ಪರವರ ಮಗ ಎಂದು ತೋರಿಸಲು ಅವರ ಕುಟುಂಬದಲ್ಲಿ ಪಡಿತರ ಚೀಟಿ ಪ್ರಕಾರ ರೇಷನ್ ಪಡೆದಿರುವ ಬಗ್ಗೆ ಯಾವುದೇ ದಾಖಲೆ ಇಲ್ಲ. ನಾನು ಈಗ ಚನ್ನರಾಯಪಟ್ಟಣದಲ್ಲಿ ವಾಸಿಸುತ್ತಿದ್ದೇನೆ. ಆ ಬಗ್ಗೆ ಸಂಬಂಧಿಸಿದ ಪಂಚಾಯ್ತಿಯಿಂದ ವಾಸ ದೃಡೀಕರಣ ಪತ್ರವನ್ನು ಪಡೆದು ಹಾಜರುಪಡಿಸಿರುವುದಿಲ್ಲ. ನನ್ನ ಭಾವಚಿತ್ರವನ್ನು ತೋರಿಸಿದರೆ ನಾನು ಗುರುತಿಸುತ್ತೇನೆ. ನಾನು ವಯಸ್ಕನಾದಗಿನಿಂದ ಇಂದಿನ ವರೆಗೂ ಮತದಾನ ಮಾಡುತ್ತಿದ್ದೇನೆ. ನಾನು ವಯಸ್ಕನಾದಗಿನಿಂದ ಇಂದಿನ ವರಗಿನ ಮತದಾರರ ಪಟ್ಟಿಯನ್ನು ಹಾಜರುಪಡಿಸುತ್ತೇನೆ. ನಾನು ಚನ್ನರಾಯಪಟ್ಟಣದ ಹೊರತಾಗಿ ಬೇರೆ ಯಾವುದೇ ಊರಿನಲ್ಲಿ ವಾಸವಿರಲಿಲ್ಲ. ನಾನು 2018 ರಿಂದ 2022 ರ ವರೆಗೆ ವಿಜಯಪುರದಲ್ಲಿ ವಾಸವಿದ್ದೇನು ಎಂದರೆ ಸರಿಯಲ್ಲ. ಸದರಿ ಅವಧಿಯಲ್ಲಿ ನಾನು ವಿಜಯಪುರದ ಮತಕ್ಷೇತ್ರದಲ್ಲಿ ಮತದಾನ

ಮಾಡಿರುತ್ತೇನೆಂದರೆ ಸರಿಯಲ್ಲ. ಸದರಿ ಮತದಾರರ ಪಟ್ಟಿಗಳಲ್ಲಿ ನನ್ನ ತಂದೆ ಹೆಸರು ಎಂ.ಮುನಿಶಾಮಪ್ಪ ಎಂದು ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ಕರಗಪ್ಪ ಈಗ ಜೀವಂತ ಇಲ್ಲ ಎಂದರೆ ಸರಿ. 2 ನೇ ಪ್ರತಿವಾದಿ ಜೀವಂತ ಇರುತ್ತಾರೆ. ನನ್ನ ಮತ್ತು 2 ನೇ ಪ್ರತಿವಾದಿಯ ರಕ್ತದ ಶಾಂಪಲ್‌ನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ ಕೊಡಲು ನನ್ನ ಅಭ್ಯಂತರ ಇರುವುದಿಲ್ಲ. ದಾವಾಸ್ತಿಗಳು ಮೂಲತಃ ಪಿತ್ರಾರ್ಜಿತ ಆಸ್ತಿಗಳು. ದಾವ ಐಟಂ ಸಂಖ್ಯೆ 1 ನ್ನು ನಮ್ಮ ತಾತ ದೊಡ್ಡಬಚ್ಚಪ್ಪ ಮತ್ತು ನಮ್ಮ ತಂದೆ ಕರಗಪ್ಪರವರು ಖರೀದಿಸಿರುತ್ತಾರೆ. ಆ ಬಗ್ಗೆ ಪಹಣಿ ಪತ್ರಿಕೆಗಳ ಹೊರತಾಗಿ ಬೇರೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಮೂಲತಃ 7 ಐಟಂ ಸ್ವತ್ತುಗಳಿಗೆ ಮಾತ್ರ ದಾವೆ ಸಲ್ಲಿಸಿದ್ದೇನೆಂದರೆ ಸರಿ. ಆ ನಂತರ ಉಳಿದ ಆಸ್ತಿಗಳನ್ನು ಸೇರ್ಪಡೆ ಮಾಡಿರುತ್ತೇನೆಂದರೆ ಸರಿ. ದಾವಾಸ್ತಿಗಳ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೆ ದಾವೆ ಸಲ್ಲಿಸುವಾಗಲೇ ಎಲ್ಲಾ ಆಸ್ತಿಗಳನ್ನು ಸೇರಿಸುತ್ತಿದ್ದೇನು ಎಂದರೆ ಸರಿಯಲ್ಲ. ನಾನು ಚನ್ನರಾಯಪಟ್ಟಣದಲ್ಲಿ ಯಾವತ್ತು ವಾಸವಿರಲಿಲ್ಲ ಹಾಗೂ 1 ರಿಂದ 6 ಪ್ರತಿವಾದಿಗಳ ಕುಟುಂಬದ ಸದಸ್ಯನಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಈ ದಾವೆಯಲ್ಲಿ ಸಲ್ಲಿಸಿದ ತಕರಾರಿನ ಬಗ್ಗೆ ನಾನು ತಿಳಿದುಕೊಂಡಿದ್ದೇನೆ. 1 ಮತ್ತು 2 ನೇ ಪ್ರತಿವಾದಿಗಳ ವಿವಾಹ 1976 ರಲ್ಲಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ತದನಂತರ ಅವರಿಗೆ 3 ರಿಂದ 6 ನೇ ಪ್ರತಿವಾದಿಗಳು, 4 ಜನ ಮಕ್ಕಳು ಜನಿಸಿದರು ಎಂದರೆ ಸರಿ. ಅವರು ನಾನು ಜನಿಸಿದ ನಂತರ ಜನಿಸಿರುತ್ತಾರೆ ಎಂದು ನುಡಿಯುತ್ತೇನೆ. ವಾದ ಪತ್ರದಲ್ಲಿ 2 ನೇ ಪ್ರತಿವಾದಿಯ ಹೆಸರು 59 ವರ್ಷ ಎಂದು ನಮೂದಿಸಿರುತ್ತೇನೆಂದರೆ ಸರಿ. ಅವರ ವಯಸ್ಸು ಗೊತ್ತಿಲ್ಲದೇ ನಮೂದಿಸಿರುತ್ತೇನೆ ಎಂದು ನುಡಿಯುತ್ತೇನೆ. ದಾವ ಸಲ್ಲಿಸುವ ಕಾಲಕ್ಕೆ ನನ್ನ ವಯಸ್ಸು 43 ವರ್ಷ ಎಂದು ನಮೂದಿಸಿರುತ್ತೇನೆಂದರೆ ಸರಿ. ಸದರಿ ವಯಸ್ಸನ್ನು ಪರಿಗಣಿಸಿದರೆ ನಾನು 1 ಮತ್ತು 2 ನೇ ಪ್ರತಿವಾದಿಗಳ ಮಗ ಅಲ್ಲ ಎಂದರೆ ವಯಸ್ಸಿನ ವ್ಯತ್ಯಾಸ ಆಗಿರಬಹುದು ಎಂದು ನುಡಿಯುತ್ತೇನೆ. 1 ರಿಂದ 6 ನೇ ಪ್ರತಿವಾದಿಗಳ ಬಿ ಪಿ ಎಲ್ ಕಾರ್ಡ್ ನಲ್ಲಿ ನನ್ನ ಹೆಸರು ನಮೂದು ಇಲ್ಲ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಇನ್ಸಿಯಲ್ ಬಿ ಕರಗಪ್ಪ ಎಂದರೆ ಸರಿ. ನನ್ನ ಶಾಲಾ ದಾಖಲೆಗಳಲ್ಲಿ ಕರಗಪ್ಪ ಡಿ ಎಂದು ನಮೂದು ಎಂದು ಇದೆ ಎಂದರೆ ಅದನ್ನು ಬರೆಯುವಲ್ಲಿ ವ್ಯತ್ಯಾಸ ಆಗಿದೆ ಎಂದು ನುಡಿಯುತ್ತೇನೆ. ನಿಪಿ-11 ರಲ್ಲಿ ತಪ್ಪು ನಮೂದು ಆಗಿರುವ ಬಗ್ಗೆ ಶಾಲಾ ಮುಖ್ಯೋಪಾಧ್ಯಾರನ್ನು ನಾನು ಪ್ರಶ್ನೆ ಮಾಡಿರುವುದಿಲ್ಲ. ನಿಪಿ-12 ನ್ನು ಬಿ.ಕರಗಪ್ಪ ಎಂದು ನಾನೇ ಹೇಳಿ ಬರೆಸಿಕೊಂಡು ಬಂದಿರುತ್ತೇನೆಂದರೆ ಸರಿಯಲ್ಲ. ಶಾಲೆಯ ರಿಜಿಸ್ಟರ್‌ನ ದೃಢೀಕೃತ ನಕಲನ್ನು ತಂದು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನಿಪಿ-13 ನ್ನು ನಾನು 2016 ರಲ್ಲಿ ಮಾಡಿಸಿರುತ್ತೇನೆ. ನಿಪಿ-14 ರ ಖಾತೆಯನ್ನು ಸಹ 2016 ರಲ್ಲಿ ತೆರೆದಿರುತ್ತೇನೆ. ಸದರಿ 2 ದಾಖಲೆಗಳನ್ನು ಈ ದಾವೆ ದಾಖಲಿಸುವ

ಸಂದರ್ಭದಲ್ಲಿ ಮಾಡಿಸಿರುತ್ತೇನೆಂದರೆ ಸರಿ. 2016 ಕ್ಕಿಂತ ಪೂರ್ವದಲ್ಲಿ ಯಾವತ್ತಿಗೂ ಸಹ ಚನ್ನರಾಯಪಟ್ಟಣದಲ್ಲಿ ನನ್ನ ಗುರುತಿನ ಚೀಟಿ ಇರಲಿಲ್ಲ ಎಂದರೆ ಸರಿ. ನಿಪಿ-13 ನ್ನು ನಾನೇ ಮಾಹಿತಿ ನೀಡಿ ತಯಾರಿಸಿರುತ್ತೇನೆ ಎಂದರೆ ಸರಿ. 2016 ಕ್ಕಿಂತ ಪೂರ್ವದಲ್ಲಿ ಚನ್ನರಾಯಪಟ್ಟಣದಲ್ಲಿ ನಾನು ವಾಸವಿದ್ದೆ ಎಂದು ತೋರಿಸಲು ಚುನಾವಣೆಗೆ ಸಂಬಂದ ಪಟ್ಟ ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿ. ನಿಪಿ-14 ನ್ನು ಸಹ ನಾನೇ ಮಾಹಿತಿ ನೀಡಿ ಖಾತೆ ತೆರೆದಿರುತ್ತೇನೆ. ನಾನು ಚುನಾವಣಾ ಗುರುತಿನ ಚೀಟಿಯನ್ನು ಮಾಡಿಸಿದ ನಂತರ 4 ನೇ ಪ್ರತಿವಾದಿ ಅರ್ಜಿ ಸಲ್ಲಿಸಿ ಅದನ್ನು ರದ್ದುಪಡಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ನನಗೆ ಸಮಾಂಜಯಿಸಿ ಕೋರಿ ನೋಟಿಸ್ ಜಾರಿ ಮಾಡಿರುತ್ತಾರೆಂದರೆ ನನಗೆ ಯಾವುದೇ ನೋಟಿಸ್ ಜಾರಿಯಾಗಿರುವುದಿಲ್ಲ ಎಂದು ನುಡಿಯುತ್ತೇನೆ. ನನಗೆ ಆ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಕೂಡ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-13 ರದ್ದು ಆದ ಬಗ್ಗೆ ಸಕ್ಷಮ ಪ್ರಾಧಿಕಾರಿ ಎದುರು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ದಾಖಲೆ ರದ್ದು ಆದ ನಂತರ ಚನ್ನರಾಯಪಟ್ಟಣ ಮತಕ್ಷೇತ್ರದಲ್ಲಿ ನನ್ನ ಹೆಸರು ಇರುವುದಿಲ್ಲ ಮತ್ತು ನಾನು ಮತದಾನ ಮಾಡುತ್ತಿಲ್ಲ ಎಂದರೆ ಸರಿ. ನಾನು ಯಾವತ್ತಿಗೂ ಚನ್ನರಾಯಪಟ್ಟಣದಲ್ಲಿ ವಾಸವಿಲ್ಲ ಹಾಗೂ 1 ಮತ್ತು 2 ನೇ ಪ್ರತಿವಾದಿಗಳು ನನ್ನ ತಂದೆ-ತಾಯಿ ಅಲ್ಲ ಎಂದರೆ ಸರಿಯಲ್ಲ. ನನ್ನ ಪತ್ನಿ ಹೊಸಕೋಟೆ ತಾಲ್ಲೂಕಿನ ಕೊಳತೂರು ಗ್ರಾಮದವರು. ನಾನು ಮದುವೆ ಆದ್ಯಾಗಿನಿಂದ ಕೊಳತೂರು ಗ್ರಾಮದಲ್ಲಿ ವಾಸವಿರುತ್ತೇನೆಂದರೆ ವಿಜಯಪುರ ಮತ್ತು ಕೊಳತೂರು 2 ಕಡೆ ವಾಸವಿರುತ್ತೇನೆ ಎಂದು ನುಡಿಯುತ್ತೇನೆ. ನಾನು 2 ಮದುವೆ ಮಾಡಿಕೊಂಡಿದ್ದೇನೆಂದರೆ ಸರಿ. ನಾರಾಯಪುರದಲ್ಲಿ ಮೊದಲನೆ ಮದುವೆ ಆಗಿ ವಿಜಯಪುರದಲ್ಲಿ ವಾಸವಿದ್ದು, ನಂತರ 2 ನೇ ಮದುವೆ ಆದ ನಂತರ ಕೊಳತೂರಿನಲ್ಲಿ ವಾಸವಿರುತ್ತೇನೆಂದರೆ ಸರಿಯಲ್ಲ. ಮೊದಲನೇ ಮದುವೆ ಯಾವ ವರ್ಷ ಮಾಡಿಕೊಂಡಿರುತ್ತೇನೆ ಮತ್ತು ವಿಜಯಪುರದಲ್ಲಿ ಎಷ್ಟು ವಾಸವಿರುತ್ತೇನೆಂದು ಗೊತ್ತಿಲ್ಲ. ನನ್ನ ಮೊದಲನೆ ಪತ್ನಿ ಎಷ್ಟು ಜನ ಮಕ್ಕಳು ಗೊತ್ತಿಲ್ಲ. ನನ್ನ 2 ನೇ ಪತ್ನಿಗೆ 2 ಜನ ಮಕ್ಕಳು. 2 ನೇ ಮದುವೆ ಯಾವ ವರ್ಷ ಮಾಡಿಕೊಂಡಿದ್ದೇನೆಂದು ನೆನಪಿಲ್ಲ. ನನಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆ ಬಗ್ಗೆ ತಿಳಿಸಿದರೆ ನ್ಯಾಯಾಲಯಕ್ಕೆ ವಾಸ್ತವ ಅಂಶ ಮನವರಿಕೆ ಆಗುತ್ತದೆಂಬ ಕಾರಣಕ್ಕೆ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಹೆಂಡತಿ ಮಕ್ಕಳ ರೇಷನ್ ಕಾರ್ಡ್‌ನ್ನು ಮಾಡಿಸಿರುತ್ತೇನೆ. ಹೊಸಕೋಟೆ ತಾಲ್ಲೂಕಿನ ಕೊಳತೂರಿನಲ್ಲಿ ಮಾಡಿಸಿರುತ್ತೇನೆ. ಯಾವ ವರ್ಷ ಮಾಡಿಸಿರುತ್ತೇನೆಂದು ನನಗೆ ನೆನಪಿಲ್ಲ. ಸದರಿ ದಾಖಲೆಯನ್ನು ಹಾಜರುಪಡಿಸಬಹುದು. ಕೊಳತೂರು ಗ್ರಾಮದಲ್ಲಿ ಬಿ ಪಿ ಎಲ್ ಕಾರ್ಡ್ ಮುಖಾಂತರ ಸುಮಾರು ವರ್ಷದಿಂದ ರೇಷನ್ ಪಡೆತ್ತಿದ್ದು, ಎಷ್ಟು ವರ್ಷದಿಂದ ಎಂದು ನೆನಪಿಲ್ಲ. ಈಗಲೂ ಸಹ ಕೊಳತೂರು ಗ್ರಾಮದಲ್ಲಿ ರೇಷನ್ ಪಡೆಯುತ್ತಿದ್ದೇನೆ.

ಈಗಲೂ ಸಹ ಮತದಾರರ ಪಟ್ಟಿಯಲ್ಲಿ ಕೊಳತೂರು ಗ್ರಾಮದಲ್ಲಿ ನನ್ನ ಹೆಸರು ನಮೂದು ಇದೆ ಎಂದರೆ ಸರಿ. ಎಷ್ಟು ವರ್ಷದಿಂದ ಅಲ್ಲಿ ಮತದಾನ ಮಾಡುತ್ತಿದ್ದೇನೆಂದು ಗೊತ್ತಿಲ್ಲ.

**( ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಅವಕಾಶ ಕೋರಿದ್ದರಿಂದ ಪ್ರಕರಣವನ್ನು ಮುಂದೂಡಲಾಯಿತು. )**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**